ಅಧ್ಯಕ್ಷರು: ಎಲ್ಲರೂ ಒಂದು ನಿಮಿಷ ಮಾತನಾಡಬೇಕು.

ಶ್ರೀ ಎನ್.ಎಲ್.ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ನಾನು ಒಂದು ಮನವಿಯನ್ನು ತಮ್ಮಲ್ಲಿ ಮಾಡಿಕೊಳ್ಳುತ್ತೇನೆ. ನಾವು ತಿಪ್ಪಗೊಂಡನಹಳ್ಳಿ ಕೆರೆಯ ನೀರನ್ನು ಕುಡಿಯುವವರು, ದಯವಿಟ್ಟು ಅಲ್ಲಿ ವಿಷದ ನೀರು ಬರುತ್ತಿರುವುದನ್ನು ನಿಲ್ಲಿಸಬೇಕು. ಅಲ್ಲಿ ಸುತ್ತಮುತ್ತ ಬಡಾವಣೆಗಳಲ್ಲಿ ಬರುತ್ತಿರುವಂತಹ ಕಾರ್ಖಾನೆಗಳನ್ನು ನಿಲ್ಲಿಸಬೇಕು. ಇದರಿಂದ ಬಹಳ ಅಪಾಯವಾಗಿದೆ. ಬೆಂಗಳೂರಿಗೆ ನೀರನ್ನು ಕೊಡುತ್ತಿರುವುದು ತಿಪ್ಪಗೊಂಡನಹಳ್ಳಿ ಕೆರೆಯಿಂದ. ಇವತ್ತು ಅಲ್ಲಿ ಸುತ್ತಮುತ್ತ ಇರುವಂತಹ ಕಾರ್ಖಾನೆಗಳಿಂದ ಬರುತ್ತಿರುವ ನೀರನ್ನು ಕುಡಿಯುತ್ತಿದ್ದೇವೆ. ರಾಜಾಜಿನಗರ, ಮಲ್ಲೇಶ್ವರ, ಗಾಂಧಿನಗರ ಇಲ್ಲಿ ಇರುವವರ ಸ್ಥಿತಿ ಏನಾಗಬಹುದು. ಮುಂದೆ ಆಗುವಂತಹ ಅನಾಹುತಗಳಿಗೆ ಬಹುಶಃ ಈ ಸರ್ಕಾರ ಹೊಣೆಯಾಗುತ್ತದೆ. ಅಲ್ಲಿ ಬೆರಕೆ ಆಗುತ್ತಿರುವುದು, ಅದು ಸೀಸ ಇರಬಹುದು, ಕ್ರೋಮಿಯಂ ಇರಬಹುದು, ನಾವು ಅಪಾಯದ ಅಂಚಿನಲ್ಲಿದ್ದೇವೆ. ಕ್ಯಾಚ್‌ಮೆಂಟ್ ನೀರನ್ನು ಸಹ ರಾಜಕಾಲುವೆಗಳನ್ನು ಬ್ಲಾಕ್ ಮಾಡಿದ್ದಾರೆ. ಈ ವಿಷಾನಲದ ನೀರನ್ನು ಸಹ ಬಿಡುತ್ತಿದ್ದಾರೆ. ನಾಳೆ ದಿವಸ ನಮ್ಮ ಸ್ಥಿತಿ ಏನಾಗಭೆಕು. ದಯವಿಟ್ಟು ಸರ್ಕಾರ ತುರ್ತಾಗಿ ಗಮನವನ್ನು ಹರಿಸಬೇಕೆಂದು ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಪ್ರಕಾಶ್‌ರವರೆ ತಾವು ಉತ್ತರವನ್ನು ಕೊಡುತ್ತೀರಾ?

ಶ್ರೀ ಎಂ.ಪಿ.ಪ್ರಕಾಶ್(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ನಗರಾಭಿವೃದ್ಧಿ ಕಾರ್ಯದರ್ಶಿಗಳನ್ನು ಕರೆಸಿ ಅವರ ಜೊತೆಗೆ ಮಾತನಾಡಿದ್ದೇನೆ. ಆ ಎಲ್ಲಾ ವಿವರಗಳನ್ನು ತರಿಸಿಕೊಡುತ್ತೇನೆಂದು ಹೇಳಿದ್ದಾರೆ. ಇದಕ್ಕೆ ಸಮಯಾವಕಾಶ ಬೇಕಾಗುತ್ತದೆ. ಪ್ರಾಯಶಃ 12.30 ಅಥವಾ 1.00 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ಆ ಸಮಯದಲ್ಲಿ ಆದರೂ ಉತ್ತರವನ್ನು ಕೊಡಿಸುತ್ತೇನೆ. ಇಲ್ಲದೇ ಇದ್ದರೆ ನಾನು ಮಾಹಿತಿಯನ್ನು ತರಿಸಿಕೊಂಡು ಖಂಡಿತವಾಗಿಯೂ ಉತ್ತರವನ್ನು ಕೊಡಿಸುತ್ತೇನೆ.

(ಈ) ವಿಷಯ: ಮುರುಡಿ ಗ್ರಾಮದ ಚಿಕ್ಕನೀರಾವರಿ ಯೋಜನೆಗೆ ವಶಪಡಿಸಿಕೊಂಡ ಜಮೀನಿಗೆ ಪರಿಹಾರ ಧನವನ್ನು ಕೊಡುವ ಬಗ್ಗೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮುರುಡಿ ಗ್ರಾಮದಲ್ಲಿ ಒಂದು ಚಿಕ್ಕ ನೀರಾವರಿ ಹೊಸ ಕೆರೆಯನ್ನು ಮಾಡಿದ್ದಾರೆ. ಅಲ್ಲಿಯ ರೈತರು

ಭೂಮಿಯನ್ನು ಕಳೆದುಕೊಂಡಿದ್ದಾರೆ. ಇವತ್ತಿಗೂ ಕೂಡ ಪರಿಹಾರ ಧನ ಸಿಕ್ಕಿರುವುದಿಲ್ಲ. ಮುಂಡುರಿಗಿ ತಾಲ್ಲೂಕು ಮುರಡಿ ಎಂಬ ಗ್ರಾಮ. ಸಿಂಗಾಟಾಲೂರಿಗೆ ಕೊಟ್ಟಂತೆ ಹೆಚ್ಚಿನ ಪರಿಹಾರಧನವನ್ನು ಕೊಡಿ ಎಂದು ಕೇಳುತ್ತಿದ್ದಾರೆ. ತಮಗೂ ಕೂಡ ಅಲ್ಲಿಯ ಜನರು ಬಂದು ಅರ್ಜಿಯನ್ನು ಕೊಟ್ಟಿದ್ದಾರೆ. ತಾವು ಕೂಡ ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರಿ. ದಯವಿಟ್ಟು ಅದರ ಬಗ್ಗೆ ತಾವು ಕೂಡಲೇ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ. ಸಿಂಗಾಟಾಲೂರಿಗೆ ಹೆಚ್ಚಿಗೆ ಏನು ಕೊಟ್ಟಿದ್ದೀರಿ, ಅದೇ ರೀತಿಯಾಗಿ ಹೆಚ್ಚುವರಿ ಪರಿಹಾರಧನವನ್ನು ಅದೇ ರೀತಿಯಾಗಿ ಸಿಗುವಂತೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:(ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಮಾನ್ಯ ಎಸ್.ಎಸ್.ಪಾಟೀಲ್ ರವರು ಸಿಂಗಟಾಲೂರು ಯೋಜನೆಗೆ ಭೂಸ್ವಾಧೀನಕ್ಕಾಗಿ ಪರಿಹಾರವನ್ನು ನಗದಿಪಡಿಸಿರುವಂತೆ ಮುರುಡಿಕೆರೆಗೆ ಭೂಸ್ವಾಧೀನ ಪಡಿಸಿಕೊಂಡಿರುವ ರೈತರ ಬಗ್ಗೆ ಏನು ಮಾಡುತ್ತೀರೆಂದು ತಾವು ಕೇಳಿದ್ದೀರಿ. ನಾನು ಈ ಬಗ್ಗೆ ವಿವರವಾದ ಮಾಹಿತಿಯನ್ನು ತರಿಸುತ್ತಿದ್ದೇನೆ. ನಾನು ತತಕ್ಷಣ ಉತ್ತರವನ್ನು ಕೊಡುವಂತಹ ಸ್ಥಿತಿಯಲ್ಲಿ ಇಲ್ಲ. ತಾವು ಈಗ ಪ್ರಸ್ತಾಪ ಮಾಡಿದ್ದೀರಿ, ಖಂಡಿತವಾಗಿ ನಾನು ಆ ಕಡೆಗೆ ಗಮನವನ್ನು ಕೊಟ್ಟು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಉತ್ತರವನ್ನು ಒದಗಿಸುವ ಬಗ್ಗೆ ನಾನು ಪ್ರಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

(ಊ) ವಿಷಯ: ಗದಗ ತಾಲ್ಲೂಕು, ಹರ್ಲಾಪುರ ಗ್ರಾಮಕ್ಕೆ ಹೊಸ ಕೆರೆ ಮಾಡಿಕೊಡುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್: ಮುಂಡರಗಿ ಕ್ಷೇತ್ರಕ್ಕೆ ಸೇರಿದ ಗದಗ ತಾಲ್ಲೂಕು ಹರ್ಲಾಪುರ ಗ್ರಾಮದ ಹತ್ತಿರ ಹೊಸ ಕೆರೆ ಬೇಕೆಂದು ಹೇಳಿದ್ದೇವು. ಆ ಕೆರೆಯನ್ನು ತಾವು ಮಾಡಿಕೊಡುತ್ತೇವೆಂದು ಬಜೆಟ್‌ನಲ್ಲಿ ಹೋದ ಸಲ ನಬಾರ್ಡ್‌ನಲ್ಲಿ ಸೇರಿಸಿದ್ದೀರಿ, ದುರ್ದೈವದಿಂದ ನಬಾರ್ಡ್‌ನಲ್ಲಿ ಬರಲಿಲ್ಲ. ಅದು ನಿಂತು ಹೋಗಿದೆ, ಅದಕ್ಕಾಗಿ ಅಲ್ಲಿ ಬಹಳ ಅವಶ್ಯವಾಗಿದೆ. ಕೂಡಲೆ ಕೆರೆಯನ್ನು ಮಾಡುವ ಬಗ್ಗೆ ಬಜೆಟ್‌ನಲ್ಲಿ ಸೆರಿಸಿಕೊಂಡು ಮಾಡುತ್ತೀರಾ ಎಂದು ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.